ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರ ಕಾಮಗಾರಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

***

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ:ಜಸಂಇ 139 ಕೆಬಿಎನ್ 2011 ದಿನಾಂಕ:24/01/2012

(2) ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಇವರ ಪತ್ರ ಸಂಖ್ಯೆ:ವ್ಯನಿ/ಕೃಭಾಜನಿ/ಪರಿಷ್ಕೃತ ಅಂದಾಜು ಯುಕೆಪಿ ಹಂತ-3/ 16-17, ದಿನಾಂಕ:11.01.2017.

ಪ್ರಸ್ತಾವನೆ:

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-II ದಿನಾಂಕ:29/11/2013ರ ಮುಂದುವರೆದ ವರದಿಯಲ್ಲಿ ಕರ್ನಾಟಕ ರಾಜ್ಯಕ್ಕೆ 173 ಟಿಎಂಸಿ ನೀರು ಹಂಚಿಕೆ ಮಾಡಿರುತ್ತದೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಗೆ 130.00 ಟಿಎಂಸಿ ನೀರು ನಿಗಧಿಪಡಿಸಿರುತ್ತದೆ. ಕೃಷ್ಣಾ ನ್ಯಾಯಾಧೀಕರಣದ ಮುಂದೆ ದಾಖಲಿಸಲಾದ ಯೋಜನಾ ವರದಿಯಂತೆ 9 ಉಪ ಯೋಜನೆಗಳು ಒಳಗೊಂಡಿದ್ದು, ಒಟ್ಟು 5.30 ಲಕ್ಷ ಹೆ. ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ಹಂಚಿಕೆಯನ್ನು ಜಲಾಶಯದಲ್ಲಿ ಶೇಖರಿಸಲು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಆರ್.ಎಲ್.519.60 ಮೀ. ರಿಂದ ಆರ್.ಎಲ್. 524.256ಮೀ.ಗೆ ಎತ್ತರಿಸಬೇಕಾಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಬರುವ ಎಲ್ಲಾ ತಾಲ್ಲೂಕುಗಳು ಸತತವಾಗಿ ತೀವ್ರ ಬರಗಾಲ ಪೀಡಿತ ಪ್ರದೇಶಗಳಾಗಿರುವುದರಿಂದ ಈ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ನೀಡುವ ಉದ್ದೇಶದಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಅವಶ್ಯವಾಗಿರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಐತೀರ್ಪು ಕೇಂದ್ರ ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟವಾದ ತಕ್ಷಣವೇ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಹಂಚಿಕೆಯಾದ ನೀರನ್ನು ಬಳಸಲು ಉದ್ದೇಶಿಸಿದೆ. ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾಗುವ ಜನರಿಗೆ ಆಗುವಂತಹ ತೊಂದರೆ/ಅನಾನುಕೂಲ ತಪ್ಪಿಸುವ ಮೂಲ ಉದ್ದೇಶವಾಗಿಟ್ಟುಕೊಂಡು ಪೂರ್ವಭಾವಿ ಕ್ರಮವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಸಿದ್ಧಪಡಿಸಿಟ್ಟುಕೊಳ್ಳಲು ಮತ್ತು ಅವಶ್ಯವಿದ್ದಲ್ಲಿ ಕಾನೂನಾತ್ಮಕ ಕ್ರಮಗಳನ್ನು ಕೈಗೊಂಡು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತರ-3ರಡಿ ಒಟ್ಟಾರೆ 5.30 ಲಕ್ಷ ಹೆ. ಕ್ಷೇತ್ರಕ್ಕೆ ನೀರಾವರಿ ಕಲ್ಪಿಸಬಹುದಾದ ಸದರಿ ಯೋಜನೆಗೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಿರುವ ರೂ.17,207.00 ಕೋಟಿಗಳ ಅಂದಾಜು ಮೊತ್ತಕ್ಕೆ ತಾಂತ್ರಿಕ, ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

ಕೇಂದ್ರ ಸರ್ಕಾರದಿಂದ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 9 ಉಪ ಯೋಜನೆಗಳನ್ನು ಪೂರ್ಣಗೊಳಿಸಲು ಸುಮಾರು 5-6 ವರ್ಷಗಳು ಬೇಕಾಗಿರುತ್ತದೆ. Right to Fair Compensation and Transparency in Land Acquisition, Rehabilitation and Resettlement Act, 2013 ಸೆಕ್ಷನ್ 38(1) ರಂತೆ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸುವ 6 ತಿಂಗಳ ಮುಂಚಿತವಾಗಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಮುಂದುವರೆದು, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಸರ್ಕಾರದ ಆದೇಶ ದಿನಾಂಕ:09.01.2013ರನ್ವಯ ಕೊಪ್ಪಳ ಏತ ನೀರಾವರಿ ಯೋಜನೆಯಡಿಯಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸುವುದರಿಂದ, ಹರಿ ನೀರಾವರಿಗಿಂತ ಹೆಚ್ಚಿನ ಪ್ರದೇಶವು ನೀರಾವರಿಗೆ ಒಳಪಡುತ್ತದೆ. ಕೊಪ್ಪಳ ಏತ ನೀರಾವರಿ ಯೋಜನೆಯಲ್ಲಿ ನೀರಾವರಿ ಪ್ರದೇಶವು 48,436 ಹೆ. ರಿಂದ 1,12,000 ಹೆ. ಹೆಚ್ಚಿಸಲಾಗಿದೆ. ಇದರಿಂದ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಒಟ್ಟು 5,94,039 ಹೆ. ಭೂಮಿಗೆ ನೀರಾವರಿ ಒದಗಿಸಲು ಉದ್ದೇಶಿಸಿದೆ.

ದಿನಾಂಕ:30.03.2016ರಂದು ನಡೆದ 103ನೇ ಕೃಷ್ಣಾ ಭಾಗ್ಯ ಜಲ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪರಿಷ್ಕೃತ ಅಂದಾಜು ಮೊತ್ತವನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ರವರಿಗೆ ಸೂಚಿಸಿದೆ. ದಿನಾಂಕ:07.01.2017ರಂದು ನಡೆದ ಕೃಷ್ಣಾ ಭಾಗ್ಯ ಜಲ ನಿಗಮದ ಅಂದಾಜು ಪರಿಶೀಲನಾ ಸಮಿತಿಯು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪರಿಷ್ಕೃತ ಅಂದಾಜು ರೂ.49480.94ಕೋಟಿಗಳ ಮೊತ್ತಕ್ಕೆ ಶಿಫಾರಸ್ಸು ಮಾಡಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು ರವರು ದಿನಾಂಕ:3/9/2016 ರಂದು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪರಿಷ್ಕೃತ ಅಂದಾಜು ಮೊತ್ತ ರೂ.50,820.94 ಕೋಟಿಗಳಿಗೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗೆ ಸರ್ಕಾರವು ಕೆಲವು ವಿಷಯಗಳಲ್ಲಿ ಸ್ಪಷ್ಟೀಕರಣ ಕೋರಿದ್ದ ಮೇರೆಗೆ ಮೇಲೆ ಓದಲಾದ (2)ರಲ್ಲಿ ರೂ.51,148.94 ಕೋಟಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರಗಳು ಕೆಳಗಿನಂತಿವೆ:

| | | |
|---|---|---|
| (ಅ) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ 9 ಉಪ ಯೋಜನೆಗಳ ಕಾಮಗಾರಿಗಳ ಮೊತ್ತ | ರೂ.18028.44 ಕೋಟಿಗಳು |
| (ಆ) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಭೂಸ್ವಾಧೀನದ ಮೊತ್ತ | ರೂ.17627.00 ಕೋಟಿಗಳು |
| (ಇ) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಮೊತ್ತ | ರೂ. 12516.17 ಕೋಟಿಗಳು |
| (ಈ) | ಸಿಬ್ಬಂದಿ ವೆಚ್ಚ, ಆಡಿಟ್ & ಲೆಕ್ಕಪತ್ರ, ಪರೋಕ್ಷ ವೆಚ್ಚ ಇತ್ಯಾದಿಗಳ ವೆಚ್ಚಗಳ ಮೊತ್ತ | ರೂ. 2977.33 ಕೋಟಿಗಳು |
| | ಒಟ್ಟು ಮೊತ್ತ | ರೂ.51,148.94 ಕೋಟಿಗಳು |

ಸಚಿವ ಸಂಪುಟದ ನಿರ್ಣಯದಂತೆ ಈಗಾಗಲೇ ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:03/10/2017 ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ಭೂಪರಿಹಾರ ದರವನ್ನು ನಿಗದಿಪಡಿಸುವ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ರಚಿಸಲಾಗಿದೆ. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 209 ಕೆಬಿಎನ್ 2016, ಬೆಂಗಳೂರು, ದಿನಾಂಕ:09/10/2017**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ 2014-15ನೇ ಸಾಲಿನ ದರಪಟ್ಟಿಯ ದರಗಳಂತೆ ರೂ.51,148.94ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಈ ಯೋಜನೆಗೆ ಹಂತ ಹಂತವಾಗಿ ಭರಿಸಬೇಕಾದ ವೆಚ್ಚವನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ನಿರ್ಧರಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ (ಲೋಕೋಪಯೋಗಿ ಆರ್ಥಿಕ ಕೋಶ) ಟಿಪ್ಪಣಿ ಸಂಖ್ಯೆ:ಆಇ 484 ಆಕೋ-1/2017 ದಿನಾಂಕ:26/09/2017ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
09/10/17
(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ(ಕೃಭಾಜನಿ)

ಪ್ರತಿಯನ್ನು:

(1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಅಡಿಟ್), ಕರ್ನಾಟಕ, ಬೆಂಗಳೂರು.
(2) ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
(4) ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
(5) ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
(6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ) ವಿಧಾನ ಸೌಧ, (ಉಲ್ಲೇಖ: ಪ್ರಕರಣ ಸಂಖ್ಯೆ:ಸಿ-662/2017 ರಂತೆ)
(7) ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
(8) ಸರ್ಕಾರದ ಉಪ ಕಾರ್ಯದರ್ಶಿಗಳು (ಕೃಭಾಜನಿ/ಎಂಎಂಐ) ಜಲ ಸಂಪನ್ಮೂಲ ಇಲಾಖೆ.
(9) ಸರ್ಕಾರದ ಅಧೀನ ಕಾರ್ಯದರ್ಶಿಗಳು (ತಾಂತ್ರಿಕ-1/ತಾಂತ್ರಿಕ-4/ಎಂಎಂಐ-2&3/ಕಾವೇರಿ ಘಟಕ), ಜ ಸಂ ಇಲಾಖೆ.
(10) ಸಹಾಯಕ ಕಾರ್ಯಪಾಲಕ ಅಭಿಯಂತರರು/ತಾಂತ್ರಿಕ ಸಹಾಯಕರು, ಜ ಸಂ ಇಲಾಖೆ.
(11) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಲೋಇ-ಆಕೋ-1), ವಿಧಾನ ಸೌಧ, ಬೆಂಗಳೂರು.
(12) ಶಾಖಾ ರಕ್ಷಕ ಕಡತ/ಹೆಚ್ಚಿನ ಪ್ರತಿಗಳು.

**Translated Copy**

# Govt Of Karnataka

**Subject: Administrative approval for the Revised Estimates of Upper Krishna Project Stage-III works -reg.,**

**Reference:**

(1) Government Order No: WRD 139 KBN 2011 Dt:24/01/2012.

(2) Managing Director, KBJNL letter No: MD/KBJNL/Revised Estimate UKP-III /16-17, Dt: 11.01.2017.

## Preamble:

Krishna Water Tribunal-II on its further report dated:29/11/2013 allocated 173 TMC of water to the State of Karnataka as its share and 130 TMC of water has been allocated for Upper Krishna Project Stage-III. As per Detailed Project Report submitted before the Krishna Water Dispute Tribunal, the project involves 9 sub projects and plan to irrigate a command area of 5.30 lakhs Ha. To accommodate this allocation of water, it was necessary to increase the Almatti dam height from 519.60 m to 524.256 m.

All the Taluks coming under the Upper Krishna Project Stage-III are consecutively affected by the severe droughts and hence it is necessary to implement this project as a permanent solution. Up on issue of Gazette Notification of the Krishna Water Dispute Tribunal -II award by Government of India, it is decided to use the allocated water for the Upper Krishna Project Stage-III. In order to avoid the problems /adverse effects on project affected persons from the Almatti reservoir, preliminary measures like Rehabilitation and Resettlement and other works shall be taken up and also complete the works if needed legally. As per letter Ref (1), in principle Administrative approval has been accorded for Rs. 17,207.00 Crores to Upper Krishna Project Stage-III through Government order to irrigate a total are of 5.30 lakhs Ha considering 2011-12 standard rates.

Completion of 9 sub projects requires 5-6 years from the date of issue of Government of India notification. As per section 38(1) of Right to Fair Compensation and Transparency in Land Acquisition, Rehabilitation and Resettlement Act, 2013 Rehabilitation and Resettlement works needs to be completed before 6 months from the storage of water in the reservoir.

Further, as per Upper Krishna Project Stage-III Government Order Dated: 09.01.2013, Drip Irrigation System has been incorporated in Koppal Lift Irrigation Project and hence, area under drip irrigation is more than the flow Irrigation. Area under Koppal Lift Irrigation project had been increased form 48,426 Ha to 1,12,000 Ha. Hence, Upper Krishna Project Stage-III Project plan to irrigate an area of 5,94,039 Ha.

The Board of Directors of Krishna Bhagya Jala Nigam Ltd in its 103rd meeting held on 30.03.2016, informed the Managing Director of Krishna Bhagya Jala Nigam Limited to

Executive Engineer,
KBJNL: Dam Division,
Almatti

submit the Revised Estimates of Upper Krishna Project Stage-III to Government for according Administrative Approval. Estimate Review Committee of Krishna Bhagya Jala Nigam Limited in its meeting held on 07.01.2017 recommended the revised estimate of Rs. 49480.94 crores for Upper Krishna Project Stage-III.

Managing Director vide dated: 03.09.2016 submitted the Revised Estimate of Upper Krishna Project Stage-III for Rs.50,820.94 Crores for approval. For the proposal, Government has sought certain clarifications and vide Ref (2), an estimate of Rs.51,148.94 Crores has been submitted. Details are given below:

| | | |
|---|---|---|
| a. | Cost of 9 sub projects under Upper Krishna Project Stage-III | Rs. 18,028.44 Crores |
| b. | Upper Krishna Project Stage-III Land Acquisition Cost | Rs. 17,627.17 Crores |
| c. | Upper Krishna Project Stage-III Rehabilitation and Resettlement Cost | Rs. 12,516.17 Crores |
| d. | Employee Cost, Audit & Accounting, Indirect Cost, Miscellaneous Cost | Rs.2977.33 Crores |
| | **Total Cost** | **Rs. 51,148.94 Crores** |

As per earlier cabinet decision, Cabinet Sub-Committee has been constituted under the Chairmanship of Revenue Minister dated 03/10/2017 to decide on fixing compensation for the land losers, review and recommendations. After careful examination of the details explained in the preamble, following order has been issued;

## **Government order number: WRD 209 KBN 2016, Bengaluru, dated: 09.10.2017**

The Administrative Approval in hereby accorded for the Upper Krishna Project Stage-III for the revised estimate of Rs. 51,148.94 Crores considering 2014-15 Standard Rates and with a condition to release the amount under various stages in consultation with Finance Department.

This order has been passed with consensus of Finance Department (PWD Finance Cell) Notification no: FD 434 FC -1/2017 dated 26/09/2017.

By order and in the name of
Governor of Karnataka
Sd/-
(B Harinarayana)
Under Secretary to Government (Technical -4) (I/c)
Water Resource Department

Executive Engineer,
KBJNL: Dam Division,
Almatti

**Translated Copy**

## Copy To:

1) The Principal Account General (A & E), Karnataka, Bangalore.
2) Managing Director, Krishna Bhagya Jala Nigam Ltd, Bangalore.
3) Personal Secretary to Principal Secretary to Government, Water Resource Department, Vidhana Soudha, Bangalore.
4) Personal Secretary to Secretory to Government, Water Resource Department, Vidhana Soudha, Bangalore.
5) Personal Secretary to Honorable Minister, Water Resource Department, Vidhana Soudha, Bangalore.
6) Personal Secretary to Chief Secretary to Government (Cabinet), Vidhana Soudha, Bangalore (Ref: Case No-662/2017)
7) Director, Project Completion Division, Project, Department of Economics and Statistics, M.S. Building, Bangalore
8) Deputy Secretary to Government (KBJNL/MMI) Water Resource Department.
9) Under Secretary to Government (Technical-1/Technical-4/MMI-2&3/Cauvery Unit), Water Resource Department.
10) Assistant Executive Engineer/Technical Assistant, Water Resource Department.
11) Under Secretary to Government, Finance Department (PWD-FC-1), Vidhana Soudha, Bangalore.
12) Guard File/Additional Copies

Executive Engineer,
KBJNL: Dam Division,
Almatti